980

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಆರ್. ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಹೆಚ್.ಡಿ.ಕೋಟೆ ಇವರ ವಿರುದ್ಧದ ಹಣ ದುರುಪಯೋಗದ ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ:

1. ಸರ್ಕಾರದ ಕಾರಣ ಕೇಳುವ ಪತ್ರದ ಸಂಖ್ಯೆ: ಕೃತೋಇ 08 ಕೃಪವಿ 2007, ದಿನಾಂಕ: 26-02-2007.
2. ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಇವರ ಲಿಖಿತ ಹೇಳಿಕೆ ದಿನಾಂಕ:11-04-2007
3. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 08 ಕೃಪವಿ 2007, ದಿನಾಂಕ: 11-08-2008 ಮತ್ತು ದಿನಾಂಕ:21-03-2011.
4. ವಿಚಾರಣಾಧಿಕಾರಿಯವರ ವರದಿ ದಿನಾಂಕ: 25-09-2012.
5. ಸರ್ಕಾರದ ಎರಡನೇ ಕಾರಣ ಕೇಳುವ ಪತ್ರದ ಸಂಖ್ಯೆ: ಕೃತೋಇ 08 ಕೃಪವಿ 2007, ದಿನಾಂಕ: 28-12-2012.
6. ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಎರಡನೇ ಕಾರಣ ಕೇಳುವ ನೋಟಿಸಿಗೆ ಲಿಖಿತ ಹೇಳಿಕೆ ದಿನಾಂಕ:26-02-2013.

*********

ಪ್ರಸ್ತಾವನೆ:

ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಹೆಚ್.ಡಿ.ಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಖಜಾನೆಯಿಂದ ಎ.ಸಿ.ಬಿಲ್ಲುಗಳ ಮೂಲಕ ರೂ. 1,32,000/- ಡ್ರಾ ಮಾಡಿ ಲೆಕ್ಕ-ಪತ್ರ ಸಲ್ಲಿಸದೆ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ ಅವರಿಗೆ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿ ಕಾರಣ ಕೇಳುವ ಪತ್ರವನ್ನು ಆಪಾದನಾ ಪಟ್ಟಿಯೊಂದಿಗೆ ಜಾರಿ ಮಾಡಲಾಗಿತ್ತು.

ಮೇಲೆ ಕ್ರಮಾಂಕ(2)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ರವರು ತಮಗೆ ಜಾರಿ ಮಾಡಿದ ಕಾರಣ ಕೇಳುವ ಪತ್ರಕ್ಕೆ ನೀಡಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಮೇಲೆ ಕ್ರಮಾಂಕ:(3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ.ಎನ್.ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಆಡಳಿತಾಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಮೈಸೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ಪ್ರಕರಣದ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಹೆಚ್.ಡಿ.ಕೋಟೆ ಇವರ ವಿರುದ್ಧದ ಕೆಳಕಂಡ ಆರೋಪಗಳು ರುಜುವಾತಾಗಿರುತ್ತವೆಂದು ವರದಿಯನ್ನು ನೀಡಿರುತ್ತಾರೆ.

1) 2002-03ನೇ ಹಾಗೂ 2004-05ನೇ ಸಾಲಿನಲ್ಲಿ ಹೆಚ್.ಡಿ.ಕೋಟೆ ಸಹಾಯಕ ಕೃಷಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಎ.ಸಿ. ಬಿಲ್ಲಿನ ಮೂಲಕ ರೂ. 1,32,000/-ಗಳನ್ನು ಖಜಾನೆಯಿಂದ ಡ್ರಾ ಮಾಡಿ 3 ವರ್ಷ ಕಳೆದರೂ ಸದರಿ ಹಣಕ್ಕೆ ಲೆಕ್ಕ ಪತ್ರ ನೀಡದೇ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ.

2) ಸದರಿಯವರು ಸಹಾಯಕ ಕೃಷಿ ನಿರ್ದೇಶಕರಾಗಿ ಹೆಚ್.ಡಿ ಕೋಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರೂ. 1,32,000-/ಗಳನ್ನು ಡ್ರಾ ಮಾಡಿ ಸದರಿ ಮೊತ್ತವನ್ನು ನಗದು ಪುಸ್ತಕದಲ್ಲಿ ಅವರ ಹೆಸರಿನಲ್ಲಿ ಹಣ ಪಡೆದಿರುವ ಬಗ್ಗೆ ಡಿಸೆಂಬರ್ 2005ರಿಂದ ಪ್ರತಿ ಮಾಹೆಯ ಮಾಸಿಕ ಘೋಷ್ವಾರೆಯಲ್ಲಿ ನಮೂದಿಸಿ ನಗದು ಪುಸ್ತಕದಲ್ಲಿ ಧೃಢೀಕರಿಸಿ ನಿಯಮ ಉಲ್ಲಂಘಿಸಿರುತ್ತಾರೆ.

3) ಇವರು ಸಹಾಯಕ ಕೃಷಿ ನಿರ್ದೇಶಕರಾಗಿ ಹೆಚ್.ಡಿ. ಕೋಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಎ.ಸಿ. ಬಿಲ್ಲಿನ ಮೇಲೆ ರೂ. 1,32,000/-ಗಳನ್ನು ನಗದೀಕರಿಸಿ ಸದರಿ ಹಣದಲ್ಲಿ ಕೃಷಿ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸದೆ ಎಂ.ಸಿ.ಇ ನಿಯಮ 37(2)(3)ನ್ನು ಪಾಲಿಸದೇ, ಜವಾಬ್ದಾರಿಯತ ಅಧಿಕಾರಿಯಾಗಿ ಬೇಜವಾಬ್ದಾರಿಯಿಂದ ವರ್ತಿಸಿ, ಸರ್ಕಾರಿ ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ.

4) ಇವರು ಹೆಚ್.ಡಿ.ಕೋಟೆಯಲ್ಲಿ ಸಹಾಯಕ ಕೃಷಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಿಯಂತ್ರಾಣಾಧಿಕಾರಿಯವರು ದಿನಾಂಕ: 28-07-2005, 12-01-2006, 18-02-2006, ಹಾಗೂ ದಿ-13-07-2006ರಲ್ಲಿ ನೀಡಿದ ಸೂಚನೆ ಹಾಗೂ ಮಾರ್ಗಸೂಚಿಯನ್ನು ಪಾಲಿಸದೇ ಕರ್ತವ್ಯ ಚ್ಯುತಿ ಎಸಗಿರುತ್ತಾರೆ.

---

ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರದ ಪರವಾಗಿ 4 ಸಾಕ್ಷಿದಾರರಿದ್ದು ಅವರುಗಳು ವಿಚಾರಣೆಯ ಸಮಯದಲ್ಲಿ ಆಪಾದಿತ ಅಧಿಕಾರಿಯವರಾದ ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಹೆಗ್ಗಡದೇವನ ಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಎ.ಸಿ.ಬಿಲ್ಲುಗಳ ಮೂಲಕ ಡ್ರಾ ಮಾಡಿದ ರೂ.1,32,000/- ಗಳಿಗೆ ಯಾವುದೇ ವೋಚರ್‌ಗಳನ್ನು ನೀಡಿರುವುದಿಲ್ಲವೆಂಬುದಾಗಿ ಸಾಕ್ಷಿ ನೀಡಿರುವುದಾಗಿ ವರದಿ ಮಾಡಿರುವರು.

ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು ರವರು ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆದರೂ, ಅವರು ಸದರಿ ಹಣವನ್ನು ಇತರೆ ಯೋಜನೆಗಳಿಗೆ ಉಪಯೋಗಿಸಿಕೊಂಡಿರುವ ಬಗ್ಗೆ ಯಾವುದೇ ವೋಚರ್‌ಗಳನ್ನು ನೀಡಿರುವುದಿಲ್ಲ ಮತ್ತು ವೋಚರ್‌ಗಳನ್ನು ನೀಡಿರುವುದಕ್ಕೆ ಯಾವುದೇ ದಾಖಲೆಗಳು ಅಥವಾ ಸಾಕ್ಷಿಗಳು ಈ ಪ್ರಕರಣದಲ್ಲಿ ಇರುವುದಿಲ್ಲ. ಸಾದಿಲ್ವಾರು ವೆಚ್ಚದ ಕೈಪಿಡಿ (Manual contingent expenditure) ನಿಯಮ 37(ಬಿ) (2)(3) ಮತ್ತು ಪರಂತು ಕ(1)ರಂತೆ ಎ.ಸಿ.ಬಿಲ್ಲುಗಳ ಮೇಲೆ ಡ್ರಾ ಮಾಡಿರುವ ಮೊತ್ತ ಯಾವ ತಿಂಗಳಿಗೆ ಸಂಬಂಧಿಸಿದೆಯೋ ಅದರ ಮುಂದಿನ ತಿಂಗಳ 15ನೇ ದಿನಾಂಕದೊಳಗಾದರೂ ಮಹಾಲೇಖಪಾಲರಿಗೆ ಕಳಿಸಬೇಕಾಗಿರುತ್ತದೆ. ಪಿಡಬ್ಲ್ಯೂ (1)ರವರು ತಮ್ಮ ಪಾಟೀ ಸವಾಲಿನಲ್ಲಿ ಆಪಾದಿತರು ತಾತ್ಕಾಲಿಕ ರಶೀದಿ ನೀಡಿದ ನಂತರ ಆ ಮೊತ್ತದ ಬಗ್ಗೆ ಓಚರ್‌ಗಳನ್ನು ನೀಡುವಂತೆ ಕೋರಿದ್ದರೂ ಸಹ ಸದರಿ ಓಚರುಗಳನ್ನು ಅಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿವರೆಗೂ ನೀಡಿರುವುದಿಲ್ಲ. ಆದ್ದರಿಂದ ಎನ್.ಡಿ.ಸಿ ಬಿಲ್ ತಯಾರಿಸಿಲ್ಲ ಎಂದಿದ್ದಾರೆ. ಅದೇ ರೀತಿ ಆಪಾದಿತರು ಓಚರ್ ನೀಡಿಲ್ಲದ ಬಗ್ಗೆ ಎರಡನೇ ಸಾಕ್ಷಿದಾರರು (ಪಿಡಬ್ಲ್ಯೂ2) ಹೇಳಿಕೆ ನೀಡಿದ್ದು, ಮೂರನೇ ಸಾಕ್ಷಿದಾರರು (ಪಿಡಬ್ಲ್ಯೂ3). ತಮ್ಮ ಪಾಟೀ ಸವಾಲಿನಲ್ಲಿ ಎ.ಸಿ.ಬಿಲ್ಲು ಡ್ರಾ ಮಾಡಲು ಜಂಟಿ ಕೃಷಿ ನಿರ್ದೇಶಕರು ಅನುಮತಿ ನೀಡಿದ ಬಗ್ಗೆ ವಿವರಗಳು ಬಂದಿವೆ. ಒಂದು ಎ.ಸಿ.ಬಿಲ್ಲಿನಲ್ಲಿ ಹಣ ಡ್ರಾ ಮಾಡಿದ ನಂತರ ಆ ಕಾರ್ಯಕ್ರಮ ಅನುಷ್ಠಾನಗೊಂಡು ಆ ಮೊತ್ತದ ಬಗ್ಗೆ ಎನ್.ಡಿ.ಸಿ ಬಿಲ್ಲು ಸಲ್ಲಿಸದೇ ಪುನಃ ಎ.ಸಿ.ಬಿಲ್ಲಿನಲ್ಲಿ ಹಣ ಡ್ರಾ ಮಾಡಲು ಅವಕಾಶವಿರುವುದಿಲ್ಲ. ಆದರೆ ಆಯಾ ವರ್ಷದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದ ಒತ್ತಡ ಇರುವುದರಿಂದ ಇನ್ನೊಂದು ಎಸಿ ಬಿಲ್ಲಿನಲ್ಲಿ ಹಣ ಡ್ರಾ ಮಾಡಲು ಅನುಮತಿ ಕೊಡಲಾಗಿರುತ್ತದೆ. ಕಾರ್ಯಕ್ರಮ ಅನುಷ್ಠಾನಗೊಳಿಸಬೇಕಾದ ಅಧಿಕಾರಿಯು ಸಕಾಲದಲ್ಲಿ ಅನುಷ್ಠಾನಗೊಳಿಸಲು ಆಗದೆ ಇರುವ ಕಾರಣ ಹಾಗೂ ಅನುದಾನವನ್ನು ಆ ವರ್ಷವೇ ಉಪಯೋಗಿಸಿಕೊಳ್ಳಬೇಕಾದ ಅಗತ್ಯತೆ ಇರುವುದರಿಂದ ಮಾರ್ಚ್ ಅಂತ್ಯದಲ್ಲಿ ಆ ರೀತಿ ಎ.ಸಿ.ಬಿಲ್ಲಿನಲ್ಲಿ ಡ್ರಾ ಮಾಡಲು ಆಥರೈಜೇಷನ್ ಕೊಟ್ಟಿರಬಹುದು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಆದರೆ ಇಲ್ಲಿ ಹಣ ಬಿಡುಗಡೆಯಾದ ವಿಚಾರದಲ್ಲಿ ತಕರಾರು ಇಲ್ಲ, ಕಾರ್ಯಕ್ರಮಕ್ಕಾಗಿ ಎಂದು ಆಪಾದಿತರು ಹಣ ಡ್ರಾ ಮಾಡಿ 3 ವರ್ಷಗಳು ಮುಗಿದರೂ ಆ ಬಗ್ಗೆ ಖರ್ಚು ಮಾಡಿದ ಬಗ್ಗೆ ವೋಚರುಗಳನ್ನು ಹಾಜರುಪಡಿಸದೇ ಇರುವುದು, (ಆಪಾದಿತರು ನಿಶಾನೆ ಡಿ2ರಮೇಲೆ ಆಧರಿಸುತ್ತಾರೆ) ಅವರ ಲೋಪವಾಗಿರುತ್ತದೆ. ಅಂದರೆ ತಾತ್ಕಾಲಿಕ ರಶೀದಿ ನೀಡಿ ಹಣ ಪಡೆದ ಸುಮಾರು 3 ವರ್ಷಗಳ ನಂತರ ಮೇಲೆ ಹೇಳಿದಂತೆ ನಿಯಮಗಳ ಪ್ರಕಾರ ಹಣ ಪಡೆದ ತಿಂಗಳಿನ ಮುಂದಿನ ತಿಂಗಳು 15ರೊಳಗೆ ಕಳಿಸಬೇಕಿತ್ತು.

ಹೀಗೆ ಕಳಿಸದೇ/ವೋಚರು ಸಲ್ಲಿಸದೇ ಇರುವುದರಿಂದ ಈ ಮಧ್ಯದ ಅವಧಿಗೆ ಹಣವು 'ತಾತ್ಕಾಲಿಕ ದುರುಪಯೋಗ'ವಾಗಿದೆ ಎನ್ನಬೇಕಾಗಿದೆ. ಅದು ಪಿಡಬ್ಲ್ಯೂ(3) ರವರು ಹಲವಾರು ಬಾರಿ ಸೂಚನೆ ನೀಡಿದ್ದರೂ ಅವರ ಆದೇಶಕ್ಕೂ ಬೆಲೆ ಕೊಡದೆ ಕರ್ತವ್ಯ ಲೋಪ ಮಾಡಿದ್ದಾರೆನ್ನಬೇಕಾಗಿದೆ. ನಿಶಾನೆ ಪಿ-5ರಲ್ಲಿನ ದಾಖಲಾತಿಗಳನ್ನು ನೋಡುವಾಗ 2ನೇ ಆರೋಪವು ರುಜುವಾತಾಗಿದೆಯೆನ್ನಬೇಕಾಗುತ್ತದೆ. ಪಿಡಬ್ಲ್ಯೂ(1)ರ ಸಾಕ್ಷ್ಯವನ್ನು ಗಮನಿಸುವಾಗ ಆಪಾದಿತರು ಹಣವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಅದನ್ನು ವಿತರಣೆ ಮಾಡುವ ಬಗ್ಗೆ ನಗದು ಶಾಖೆಯಿಂದ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡು ಬರುವುದಿಲ್ಲ. ಆ ಬಗ್ಗೆ ಬಹಳ ಪತ್ರ ವ್ಯವಹಾರ ನಡೆದಿದೆ ಎಂದು ಆಪಾದಿತರು ಹೇಳಿದ್ದರೂ ಯಾವೊಂದು ದಾಖಲೆಯನ್ನು ವಿಚಾರಣೆಗೆ ಹಾಜರುಪಡಿಸಿಲ್ಲ. ವೋಚರುಗಳನ್ನು ಹಾಜರುಪಡಿಸುವಂತೆ ಪ್ರತಿ ತಿಂಗಳು ಕೇಳಿದ್ದಾಗಿ 1ನೇ ಸಾಕ್ಷಿದಾರರು ಹೇಳಿದ್ದಾರೆ. ಅಲ್ಲದೆ ಆಪಾದಿತರು ಕೊಡುತ್ತೇನೆಂದು ಹೇಳಿ ಕೊಡಲಿಲ್ಲ ಎಂದು ಅವರು ಹೇಳಿದ್ದಾರೆ. ಆದ್ದರಿಂದ ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮಗಳನ್ನು ಪಾಲಿಸದಿರುವುದು ಕಂಡು ಬರುತ್ತದೆ. ಆದ್ದರಿಂದ ಆರೋಪಿತ ಅಧಿಕಾರಿಯವರ ಮೇಲಿರುವ 4 ಆರೋಪಗಳು ಸಾಬೀತಾಗಿವೆ ಎಂಬುದಾಗಿ ವಿಚಾರಣಾಧಿಕಾರಿಯವರು ನಿರ್ಣಯ ನೀಡಿರುತ್ತಾರೆ.

ವಿಚಾರಣಾಧಿಕಾರಿಯವರು ಸದರಿ ಅಧಿಕಾರಿಯವರ ಮೇಲಿನ ಆಪಾದನೆಗಳನ್ನು ಸಾಬೀತುಪಡಿಸಿದ ಹಿನ್ನೆಲೆಯಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ಶ್ರೀ ಆರ್.ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು ರವರಿಗೆ ಮೇಲೆ ಕ್ರಮಾಂಕ (5)ರಲ್ಲಿ ಓದಲಾದ ಸರ್ಕಾರದ ಎರಡನೇ ಕಾರಣ ಕೇಳುವ ಪತ್ರದೊಂದಿಗೆ ಜಾರಿ ಮಾಡಿ, ವಿಚಾರಣಾಧಿಕಾರಿಯವರ ನಿರ್ಣಯದ ಮೇಲೆ ಹೇಳಿಕೆ ಏನಾದರೂ ಇದ್ದಲ್ಲಿ ನೀಡುವಂತೆ ತಿಳಿಸಲಾಗಿತ್ತು. ಸರ್ಕಾರದ ಕಾರಣ ಕೇಳುವ ಪತ್ರವನ್ನು ಸ್ವೀಕರಿಸಿ, ತಮ್ಮ ಮೇಲಿನ ಆಪಾದನೆಗಳನ್ನು ಅಲ್ಲಗಳೆದು, ವಿಚಾರಣಾಧಿಕಾರಿಯವರು ನೀಡಿರುವ ವರದಿಯನ್ನು ತಳ್ಳಿ ಹಾಕಿ, ತಮ್ಮನ್ನು ಆರೋಪ ಮುಕ್ತರನ್ನಾಗಿ ಮಾಡುವಂತೆ ಲಿಖಿತ ಹೇಳಿಕೆಯನ್ನು ಕ್ರಮಾಂಕ (6)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯಲ್ಲಿನ ಎಲ್ಲಾ ಅಂಶಗಳನ್ನು ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ವಿಚಾರಣೆ ನಡೆಸಿದ ನಂತರ ಅಧಿಕಾರಿಯವರು ನೀಡಿದ ರಕ್ಷಣಾ ಹೇಳಿಕೆ ಹಾಗೂ ಅವರ ಲಿಖಿತ ಪ್ರತಿವಾದವನ್ನು ಮೌಖಿಕ ಮತ್ತು ಲಿಖಿತ ಸಾಕ್ಷ್ಯಾಧಾರಗಳ ಜೊತೆ ವಿಮರ್ಶಿಸಿ ಆಪಾದಿತರು ಸಲ್ಲಿಸಿದ್ದ ರಕ್ಷಣಾ ಹೇಳಿಕೆ, ಪ್ರಶ್ನಾವಳಿ ವಿವರಣೆ ಹಾಗೂ ಮೌಖಿಕ ಪ್ರತಿವಾದವನ್ನು ವಿಚಾರಣಾ ವರದಿಯಲ್ಲಿ ದಾಖಲಿಸಿ,

ಈ ಪ್ರಕರಣದಲ್ಲಿ ಸದರಿ ಅಧಿಕಾರಿಯವರ ವಿರುದ್ಧದ ಆರೋಪಗಳು ರುಜುವಾತಾಗಿರುತ್ತವೆಂದು ನಿರ್ಣಯ ನೀಡಿರುತ್ತಾರೆ. ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಆರೋಪದ ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯಂತೆ ಸದರಿಯವರಿಗೆ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಕೃಇ 8 ಕೃಪವಿ 2007,**
**ಬೆಂಗಳೂರು, ದಿನಾಂಕ:24/09/2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಆರ್.ನಾರಾಯಣ ಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು(ನಿವೃತ್ತ) ಇವರು ಈ ಹಿಂದೆ ಹೆಚ್.ಡಿ.ಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಖಜಾನೆಯಿಂದ ಎ.ಸಿ.ಬಿಲ್ಲುಗಳ ಮೂಲಕ ರೂ. **1,32,000/-**ಗಳನ್ನು ಡ್ರಾ ಮಾಡಿ ಲೆಕ್ಕ ಪತ್ರ ಸಲ್ಲಿಸದೆ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆ ಸಾಬೀತಾಗಿರುವುದರಿಂದ, ದುರುಪಯೋಗವಾಗಿರುವ ಸದರಿ ಮೊತ್ತ ರೂ. **1,32,000/-**ಗಳನ್ನು ಅವರ ನಿವೃತ್ತಿ ಉಪದಾನಗಳಿಂದ ವಸೂಲಿ ಮಾಡುವ ದಂಡನೆಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iv)ರಡಿ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಜಂಟಿ ಕೃಷಿ ನಿರ್ದೇಶಕರು ಮೈಸೂರು.
4. ಶ್ರೀ.ಎನ್.ಸುಬ್ಬರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ನಂ. 1033, 9ನೇ ಬಿ ಮೇನ್, 8ನೇ ಕ್ರಾಸ್, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ ಅಂಚೆ, ಬೆಂಗಳೂರು-560 065.
5. ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು,ಕೃಷಿ ಇಲಾಖೆ, ಇವರ ಮೂಲಕ).
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.